ದಿನ ಪತ್ರಿಕೆ
Reg No. M 1299
Daily & Weekly

For All Kinds of
Printing & Binding
The
Satyavadi
Press

SATYAVADI—Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 308] ಭಾನುವಾರ 6—6—1943 [3 ಪೈ

Opera — Aryamala
ಅಪೆರಾ——
4 ನೇ ಅಮೋಘ ವಾರ
ಅರ್ಯಮಾಲ
ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ
ಶಕುಂತಲ, ಕೃಷ್ಣ, ಮಧುರಾ
ಮುಂತಾದವರು ಪಾತ್ರವಹಿಸಿರುವರು

ರೈಲ್ವೆ ಅನಾಹುತ

ಮುಂಬಾಯಿನಿಂದ ಕಲ್ಕತ್ತಾಕ್ಕೆ ಶುಕ್ರವಾರ ಹೊರಟ ಮೇಲ್ ರೈಲಿನಲ್ಲಿ ಅನಾಹುತವಾಗಿ 50 ಜನರು ಸತ್ತರೆಂದು ಪ್ರಕಟಿಸಲಾಗಿತ್ತಷ್ಟೆ. ಇಗ ಸತ್ತವರ ಸಂಖ್ಯೆ 66 ಎಂದೂ ಗಾಯಪಟ್ಟವರು 104 ಎಂದೂ ಗೊತ್ತಾಗಿದೆ. ಈ ಅನಾಹುತ ಅಕೋಲ ಬಳಿ ಮೇಲು ಬಂಡಿಯು ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ವ್ಯಾಗನ್ನಿಗೆ ಡಿಕ್ಕಿ ಹೊಡೆದಿದ್ದರ ಫಲಿತಾಂಶವಾಗಿರುವುದು.

ಸಬ್‌ಮೆರಿನ್ ಹಾವಳಿ

ಈಚೆಗೆ ಜರ್ಮನ್ ಸಬ್ ಮೆರೀನಿನ ಹಾವಳಿ ಕಮ್ಮಿಯಾಗಿ, ಹಡಗುಗಳು ಮುಳುಗುವುದು ಕಮ್ಮಿಯಾಗಿದೆಯೆಷ್ಟೆ. ಹೀಗೆ ಸುಮ್ಮನಿರುವುದನ್ನು ನೋಡಿದರೆ ಜೂನ್‌ನಲ್ಲಿ ಯಾವಾಗಲೋ ಒಂದು ದೊಡ್ಡ ಪ್ರಳಯವಾಗುವಹಾಗಿದೆ, ಎಂದು ಅಮೆರಿಕ ನೌಕೆಯ ಸೆಕ್ರೆಟರಿ ಕರ್ನಲ್ ನಾಕ್ಸ್‌ರವರು ಹೇಳುತ್ತಾರೆ.

ಭಾರತವೂ ಅಮೇರಿಕಾವು

ಲಿಬರ್ಟಿ ಪತ್ರಿಕೆಯ ಬಾಕ್ತಿದಾರರಾದ ಮಿಸೆಸ್ ಎರಿಕಮ್ಯಾಕ್ ಈಗ ಲಂಡನ್ನಿಗೆ ಒಂದಿರುತ್ತಾಳೆ. ಈಕೆಯು ಯುದ್ಧಕಾಲದಲ್ಲಿ ಅಮೇರಿಕಾವು ಭಾರತ ವಿಷಯದಲ್ಲಿ ಏನು ಮಾಡಲು ಆಗುವುದಿಲ್ಲ, ಯುದ್ಧ ಪೂರ್ವ ಏನು ಬೇಕಾದರೂ ಮಾಡಬಹುದಾಗಿತ್ತು; ಮುಂದಿನ ವರ್ಷದ ಚುನಾವಣೆಯಲ್ಲಿ ಮಿ|| ವೆಂಡಲ್ ವಿಲ್ಕಿಯವರು ಪ್ರೆಸಿಡೆಂಟು ಸ್ಥಾನಕ್ಕೆ ಬಂದರೂ ಅವರೂ ಸಹಾ ಯುದ್ಧಕಾಲದಲ್ಲಿ ಕೈಹಾಕಲು ಆಗುವುದೇ ಇಲ್ಲ, ಎಂದು ಹೇಳಿದರು.

ಮುಷ್ಕರ ನಿಂತಿತು

ಅಮೆರಿಕಾದಲ್ಲಿ ಕಲ್ಲಿಜ್ವಲು ಕೂಲಿಗಾರರ ಮುಷ್ಕರ ಮುಕ್ತಾಯವಾಯಿತು.

ಚೀಣೀಯರ ಸಾಹಸ

ಇಚಾಂಗಿಗೆ ದಕ್ಷಿಣದಲ್ಲಿರುವ ರೈಲ್ವೆ ಕೇಂದ್ರವಾದ ಇಟ್ಟೂ ನಗರಕ್ಕೆ ಚೀಣಿ ಸೇನೆಗಳು ನುಗ್ಗಿದವು. ಇದರಿಂದ ಚಾಂಕಿಂಗಿಗೆ ಇದ್ದ ಭಯ ತಪ್ಪಿತು.

ತಾಜಾ ಸಮಾಚಾರ

ಓರಲ್ ವೆಳೆ 520 ರಷ್ಯಾ ವಿಮಾನಗಳು ಧಾಳಿಮಾಡಿ ಜರ್ಮನಿಯವರಿಗೆ ತುಂಬ ನಷ್ಟಮಾಡಿತು. ಕ್ಯೂಬನ್ನಲ್ಲಿ ರಷ್ಯನ್ನರಿಂದ ಜರ್ಮನಿಯರ 23 ನೇ ಪಡೆಯು ಹಾಳಾಯಿತು. ಇಲ್ಲಿ ಜರ್ಮನಿಯರು 1000 ವಿಮಾನವನ್ನು ಉಪಯೋಗಿಸಿತ್ತಿರುವರು ಕ್ರೀಸಾಯಾದಲ್ಲಿ ರಷ್ಯನರು ಭಾರಿಯಾದ ಟ್ಯಾಂಕು, ವಿಮಾನಗಳಿಂದ ಧಾಳಿಗೆ ಆರಂಭಿಸಿದರು ನೋವೋರಸಿನ್ ರಕ್ಷಣಾ ವ್ಯೂಹವನ್ನು ರಷ್ಯನರು ಮುರಿದಿರುವುದು.

ಆರ್ಜೆಂಟೈನಾದಲ್ಲಿ ಮಿಲಿಟರಿ ದಂಗೆ ಎದ್ದು ರಾಜಧಾನಿ ಬ್ಯೂನೋಐನ್ ನಗರವನ್ನು ದಂಗೆಕಾರರು ಹಿಡಿದುಕೊಂಡಿರುತ್ತಾರೆ. ಮಿಲಿಟರಿ ಸರ್ಕಾರ ಸ್ಥಾಪಿತವಾಗಿದೆ. ಅಧ್ಯಕ್ಷರು ಒಂದು ಮೈನ್‌ಸ್ವೀಪರಿನಲ್ಲಿ ತಲೆತಪ್ಪಿಸಿಕೊಂಡು ಊಂಗ್ವೆಗೆ ಹೋದರೆಂದು ಹೇಳಲಾಗಿದೆ. ಇದಕ್ಕೆ ಕಾರಣ ವಿದೇಶಾಂಗ ನೀತಿಯ ಬಗ್ಗೆ ಜನರಿಗೆ ಅತೃಪ್ತಿಯಾಗಿದೆ.

ಮಿ|| ಚರ್ಚಿಲರು ಅಮೇರಿಕಾ ಪ್ರವಾಸ ಮುಗಿಸಿ, ಅಲ್ಜೀರಿಸ್‌ಗೆ ಬಂದು, ಅಲ್ಲಿಗೆ ಬಂದಿದ್ದ ಮಿ|| ಈಡನ್ನು ನೋಡಿ ಜನರಲ್ ವೆಸ್ಟ್‌ಮೋವರನ್ನು ಫೋಟಿಮಾಡಿ ಟ್ಯೂನಿಸ್ ರಣರಂಗವನ್ನು ನೋಡಿ ಜೀರೋ ಡಿಗಾಲ್ ಸತ್ಕಾರ ಕೂಟದಲ್ಲಿ ತಾವೂ ಭಾಗಿಯಾಗಿದ್ದು ಶುಕ್ರವಾರ ಲಂಡನ್‌ಗೆ ಸುರಕ್ಷಿತವಾಗಿ ತಲಪಿದರು

ಈಜಿಪ್ಟಿನಲ್ಲಿ ಧಾನ್ಯ ಶೇಖರಣೆ, ಆಧಿಕ ಲಾಭಸಂಪಾದನೆಗೆ ಸಿದ್ಧರಾಗಿರುವರು. ಕೆಲವುಕಡೆ ಶೋಧನೆ ನಡಿಸಿ 2 ಲಕ್ಷ ಪೌಂಡುಗಳಷ್ಟು ಬಚ್ಚಿಟ್ಟಿದ್ದ ಪದಾರ್ಥಗಳನ್ನು ಸರ್ಕಾರದವರು ತಮ್ಮ ವಶಮಾಡಿಕೊಂಡರು.

ಅಮೇರಿಕಾ ಲೇಖಕರಾದ ಲೂಯಿ ಫಿಶರ್‌ರವರು ಭಾಷಣ ಇಲ್ಲವೇ ಲೇಖನವನ್ನು ಪ್ರಕಟಿಸುವುದಕ್ಕೆ ಪೂರ್ವ ಸರ್ಕಾರಿ ಅಡ್ವೈಸರು ವಿಮರ್ಶೆಮಾಡಿ ನಂತರ ಪ್ರಕಟಿಸಬೇಕೆಂದು ಆಜ್ಞೆಯಾಗಿದೆ.

ಇಂದಿನ ವರ್ತಮಾನ

ಬರ್ಮಾದಲ್ಲಿ ಯುದ್ಧ ನಡೆಯುತ್ತಿಲ್ಲ. ಕಾಥೇಡಾಂಗ್ ಪ್ರದೇಶದಲ್ಲಿ ಬ್ರಿಟಿಷ್ ವಿಮಾನಗಳು ಧಾಳಿಮಾಡಿ ಸುಮಾರು 100 ಶತ್ರುಗಳನ್ನು ಕೊಲೆಮಾಡಿದರು.

ಈಗ ಅಮೇರಿಕನ್ ವಿಮಾನಗಳು ಚೀನಾಕ್ಕೆ ಒಂದಿದ್ದರಿಂದ ಚೀನಾಕ್ಕೆ ರಷ್ಯಾದಿಂದ ದೊರತಕ್ಕಿಂದೂ, ಚುಂಕಿಂಗ್ ಮುತ್ಸದ್ದಿಗೆ ತಪ್ಪಿಕೆಂದೂ ಚೀನಾ ವಿದೇಶಾಂಗ ಮಂತ್ರಿ ಡಾ|| ಟಿ ವಿ. ಸೂಂಗ್‌ರವರು ಮಿ|| ರೂಸವೆಲ್ಟರಿಗೆ ಒಂದು ಪಂದಿ ಕಳಿಸಿರುತ್ತಾರೆ.

ಫ್ರೆಂಚ್ ಇತಿಹಾಸದಲ್ಲಿ ಜೂನ್ 3 ಪ್ರಸಿದ್ಧಿಯಾದ ದಿವಸ ಈದಿವಸ ಜನರಲ್ ಡಿಗಾಲ್; ಜನರಲ್ ಜೀರೋ ಇವರಿಬ್ಬರು ಒಂದು ಒಪ್ಪಂದಕ್ಕೆ ಬಂದರು. ಇದನ್ನು ನೋಡಿ ಮಾರ್ಷಲ್ ಪೆಟೇನ್ ಲವಾಲ್ ಇವರಿಗೆ ಭೀತಿಯಾಗಿದೆ.

ದಂಡಯಾತ್ರೆಯನ್ನು ಎದುರಿಸಲು ಜರ್ಮನ್ ಸಿದ್ಧತೆ ಮಾಡಿಕೊಳ್ಳುತ್ತಿರುವುದು

ಮೇ ತಿಂಗಳಲ್ಲಿ ಬ್ರಿಟಿಷ್ ವಿಮಾನಗಳು ಜರ್ಮನಿಯಮೇಲೆ 12,500 ಟನ್ ಸಿಡಿಮದ್ದನ್ನು ಹಾಕಿ ಧಾಳಿ ಮಾಡಿದವು.

ಸುಮಾರು 70 ಬ್ರಿಟಿಷ್ ಮಹಿಳೆಯರು ಭಾರತದ ಸ್ಟೇಟ್ ಸೆಕ್ರೆಟರಿಯವರಿಗೆ ಒಂದು ಪತ್ರ ಬರೆದು ಕಾಂಗ್ರೆಸ್ ನಾಯಕರೊಂದಿಗೆ ಸಂಬಂಧ ಬೆಳಸಿ, ಅವರನ್ನು ಬಿಡುಗಡೆಮಾಡಿ ಇದರಿಂದ ಸರ್ವರಿಗೂ ಕ್ಷೇಮವೆಂದು ಬರೆದಿರುತ್ತಾರೆ.

ಜನರಲ್ ಡಿಗಾಲ್, ಜನರಲ್ ಜೀರೋ ಇವರುಗಳ ಬೇಧವು ತೊಲಗಿ ಸ್ನೇಹವಾಯಿತು. ಇವರಿಬ್ಬರೂ ಇನ್ನು ಮುಂದೆ ಒಟ್ಟಿಗೆ ಫ್ರೆಂಚ್ ರಾಜ್ಯವನ್ನೂ ಜನಾಂಗವನ್ನೂ ಒಂದುಮಾಡಲು ಬದ್ಧಕಂಕಣರಾದರು

ಕಮ್ಮಿ ಬೆಲೆಯ ಬಟ್ಟೆಯ ತಯಾರಿಕೆ ವಿಷಯದಲ್ಲಿ ಸರ್ಕಾರಕ್ಕೂ ಮಿಲ್‌ಯಜಮಾನರಿಗೂ ಒಪ್ಪಂದವಾಗಿ ಇನ್ನು 6 ತಿಂಗಳಲ್ಲಿ 1 ಸಾವಿರ ಮಿಲಿಯನ್ ಗಜ ಬಟ್ಟೆಯನ್ನು ತಯಾರುಮಾಡಿ ಸೂರು ರವು.

ಕಲಕತ್ತಾ ಹೈಕೋರ್ಟಿನಲ್ಲಿ ಡಿಫೆನ್ಸ್ ಆಕ್ಟ್ 26 ರ ಮೇಲೆ ಸಂಬಂಧದಲ್ಲಿದ್ದವರು ತಪ್ಪನ್ನು ಬಿಡುಗಡೆ ಮಾಡಬೇಕೆಂದು ಮನವಿಮಾಡಿ ಕೊಂಡಿದ್ದರು. ಇವರನ್ನೆಲ್ಲಾ ಇಬ್ಬರು ಜಡ್ಜಿಗಳು ಖುಲಾಸೆಮಾಡಿ ಸೆಂಟ್ರಲ್ ಲೆಜಿಸಲೇಚರ್‌ರವರು ಮಾಡಿದ ಖಾನೂನನ್ನು ತಿದ್ದಲು ಗವರ್ನರ್ ಜನರಲ್‌ರವರಿಗೆ ಅಧಿಕಾರವನ್ನು ಪಾರ್ಲಿಮೆಂಟ್ ಕೊಟ್ಟಿಲ್ಲವೆಂದು ಹೇಳಿಬಿಟ್ಟರು. 3 ನೇ ಜಡ್ಜಿಗಳು ಈ ಇಬ್ಬರ ನ್ಯಾಯವನ್ನು ಒಪ್ಪಲಿಲ್ಲ. ಇವರನ್ನೆಲ್ಲಾ ಕೋರ್ಟಿನಿಂದ ಬಿಡುಗಡೆಯಾದ ಮೇಲೆ 1818 ನೇ ರೆಗ್ಯುಲೇಷ್ನ್ 3 ನೇ ಪ್ರಕಾರ ಎಲ್ಲರೂ ದಸ್ತಗಿರಿಯಾದರು.

ಟ್ಯಾನ್‌ಜಿಯರ್‌ನಲ್ಲಿ ಗಲಭೆ ಇನ್ನು ನಿಂತಿಲ್ಲ. ಅಲ್ಲಿರುವ ಪ್ರಜೆಗಳು ಜನರಲ್ ಫ್ರಾಂಕೋವಿಗೆ ಮಿತ್ರರ ಸಹವಾಸವನ್ನೂಡಿ ಎನ್ನುತ್ತಿರುತ್ತಾರೆ. ಸ್ಪೇನ್ ಸರ್ಕಾರವು ಮೂರು ಪ್ರಜೆಗಳನ್ನು ದಿಕ್ಕಾಪಾಲಾಗಿ ಹಿಡಿಯುತ್ತಿರುವುದು ಟುನಿಸಿಯಾದಲ್ಲಿ ಮಿತ್ರರಿಗೆ ಆದ ಜಯದಿಂದ ಟ್ಯಾನ್‌ಜಿರ್ ಜನರ ಮನಸ್ಸು ಮಿತ್ರರಕಡೆ ಸೇರಿದೆ. ಸ್ಪೇನ್ ಸೇನೆಯನ್ನು ಜಮಾಯಿಸಿಕೊಂಡಿದ್ದರೂ ಇದಕ್ಕೆ ಮಿತ್ರರು ಹೆದರುವ ಹಾಗೆ ಇಲ್ಲ, ತಾವೂ ಹೆಚ್ಚು ಸೇನೆ ತಂದಿಟ್ಟಿರುತ್ತಾರೆ. ಜನರಲ್ ಫ್ರಾಂಕೋ ಈಗಲಾದರೂ ತಿಳಿದುಕೊಳ್ಳಲಿ ಮಿತ್ರರ ಬಲ ಬಲಶಕ್ತಿ.

ಓರಿಸದೇಶದ ಸಂಸ್ಥಾನಗಳಲ್ಲಿ ಅಕ್ಕಿ ನಿರ್ಬಂಧನನ್ನು ತೆಗೆದುಹಾಕಿದ್ದರಿಂದ ಅಕ್ಕಿಯನ್ನು ಬ್ರಿಟಿಷ್ ಗಡಿ ರೈಲ್ವೆಸ್ಟೇಷನ್ನಲ್ಲಿ ಒಂದು ಚೀಲ ಅಕ್ಕಿಗೆ 35 ರೂ, ಆಗುವುದು. ಬಂಗಾಳಾದ ಮಿಡ್ನಾಪುರದಿಂದ ಜನರು ಬಾಲಸೂರಿಗೆ ರೈಲಿನಲ್ಲಿ ಟಿಕೇಟ್ ತೆಗೆದುಕೊಳ್ಳದೆ ಪ್ರಯಾಣ ಮಾಡಿ ಅಕ್ಕಿಯನ್ನು ಕೊಳ್ಳಲು ತಂಡ ತಂಡವಾಗಿ ಬರುತ್ತಿರುವುದು. ಬಂಗಾಳದಿಂದ ವರ್ತಕರೂ ಅಕ್ಕಿಯನ್ನು ಕೊಳ್ಳಲು ಬರುತ್ತಿರುವರಂತೆ.

ಪ್ರಜಾಪ್ರತಿನಿಧಿ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂ॥ 5

5 ನೇ ದಿನದ ಕಾರ್ಯಕಲಾಪಗಳು ಯಥಾ ವಿಧಿಯಾಗಿ ಇವತ್ತು 12 ಗಂಟೆಗೆ ಶ್ರೀ ರಾಜಮುತ್ಸದ್ದಿ ವೀಣಾ ಶೇಷಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಸಚಿವಮಂತ್ರಿಗಳೆಲ್ಲ ದಯವಯಿಸಿದ್ದರು.

ಪ್ರಶ್ನೋತ್ತರಗಳು 1 ಗಂಟೆ ಕಾಲ ನಡೆಯಿತು. ಪ್ರಾಮುಖ್ಯವಾಗಿ ಇವುಗಳು ಕೇವಲ ನೀರಾವರಿ ವಿಚಾರವಾಗಿದ್ದವು. ಮಿ॥ ಚಾತಪ್ಪ ನಾಯ್ಕರು ಕೆಲವು ಉಪಪ್ರಶ್ನೆಗಳನ್ನು ಹಾಕಿ ಮಾತನಾಡಿದರು. ಹಿರೇಕೆರೆ ವಿಚಾರವಾಗಿತ್ತು, ಬೆಳೆ ವಿಚಾರ, ನೀರನ್ನು ಪೋಲು ಮಾಡದಿರುವಂತೆ ಏರ್ಪಾಡುಮಾಡುವ ವಿಚಾರ,

ಅನಂತ ಒಜ್ಜೆಟ್ ವಿಚಾರದಲ್ಲಿ ಮೊದಲು ಮಾತನಾಡುತ್ತಾ, ತಾ॥ ಬ॥ ರಾಮಸ್ವಾಮಿಯವರು, ಶ್ರೀಮನ್ಮಹಾರಾಜರವರನ್ನೂ, ಅವರು 2 ವರ್ಷಗಳಿಂದ ಸುಗಮವಾಗಿ ರಾಜ್ಯಭಾರ ಮಾಡಿ ಪ್ರಜೆಗಳನ್ನು ಸಲಹುತ್ತಿರುವ ಬಗ್ಗೆಗೂ, ದಿವಾನ್ ಮಾಧವರಾಯರಿಗೆ ಕ್ಷೀಣಪ್ರದಲ್ಲಿ ಆರೋಗ್ಯ ಉಂಟಾಗಲೆಂದೂ, ಇಕ್ಷಾರ್ಜ್ ದಿವಾನರಾದ ಶ್ರೀ ಅನಂತರಾಮಯ್ಯನವರು ಸಭೆಯ ಕಾರ್ಯಕಲಾಪಗಳನ್ನು ನಡೆಸುತ್ತಿರುವ ಬಗ್ಗೆಗೂ, ಶ್ರೀ ಶ್ರೀನಿವಾಸ್ ಮತ್ತು ಶ್ರೀ ಅಪ್ಪಾಜಿಗೌಡರಿಗೆ ಹೊಸ ಹುದ್ದೆ ದೊರೆತ ಸಲುವಾಗಿಯೂ ಹೃತ್ಪೂರ್ವಕವಾಗಿ ವಾಕ್ಚಾತುರ್ಯದಿಂದ ಅಭಿನಂದಿಸಿದರು.

ಮುಂದೆ ಮಾತನಾಡುತ್ತಾ ಆಯವ್ಯಯದ ಸೇಲೆ ಸರ್ ಎಂ. ವಿಶ್ವೇಶ್ವರಯ್ಯನವರು, ಸರ್ ಮಿರ್ಜಾರವರು, ಕೈಗಾರಿಕೆಗಳನ್ನು ಒಹಳ ಹೆಚ್ಚಿಸಿಕೊಂಡು ಒಂದಿರುವದು ಹೆಮ್ಮೆಯ ವಿಷಯವೆಂದರು. ಪ್ರಜಾಪ್ರತಿನಿಧಿಸಭೆಗೆ ಸಕಲ ಅನುಕೂಲ ಸಲಕರಣೆಗಳನ್ನು ಒಳಗೊಂಡ ಭವನವನ್ನು ಕಟ್ಟಿಸಬೇಕು, ಗ್ರಾಮ ಕೈಗಾರಿಕೆಗಳನ್ನು ಪ್ರಾಥಮಿಕ ಶಾಲೆಗಳಲ್ಲೂ ಜೈಲುಗಳಲ್ಲೂ ಶಿಕ್ಷಣಕೊಟ್ಟು ನಡೆಸಬೇಕು, ಆಯುರ್ವೇದ ಮತ್ತು ಯುನಾನಿ ಔಷಧಗಳನ್ನು ಹೆಚ್ಚಿಸಲು ಯುಕ್ತ ಉತ್ತೇಜನವನ್ನು ದಯಪಾಲಿಸಬೇಕು, ಮತ್ತು ನರ್ಸರಿ ಪಾಠಶಾಲೆಗಳಿಗೆ ಪ್ರಾಮುಖ್ಯತೆಯನ್ನು ತೋರಿಸಬೇಕು, ಇದಕ್ಕೆ ಅಲ್ಲಾ ಹೆಚ್ಚಿನ ಋಣ ಒದಗಿಸಬೇಕು ಎಂದು ಹೇಳಿದರು.

ಅವಸರದ ತಠಾವು

ಚಾಮರಾಜನಗರದಲ್ಲಿ ನಡೆದ ದೊಂಬಿಯಲ್ಲಿ ಹಿಂದೂಗಳ ಅಸ್ತಿಪಾಸ್ತಿ ಪುನೆ ಮತಗಳಿಗೆ ಬಹಳ ನಷ್ಟ ಉಂಟಾಗಿರುವ ಪ್ರಯುಕ್ತ ಈ ವಿಷಯದ ಠರಾವನ್ನು ಸಭೆಯ ಮುಂದೆ ಚರ್ಚಿಸುವುದಕ್ಕೆ ಅಪ್ಪಣೆಯನ್ನು ಬೇಡಿದ್ದನ್ನು ಕುರಿತು, ಈ ಠರಾವನ್ನು ತಾ॥ 1—6—43 ರಲ್ಲೇ 1 ತಿಂಗಳ ಅವಧಿಯಲ್ಲಿ ತರಬೇಕಾಗಿತ್ತೆಂತಲೂ ಇದರ ವಿಚಾರಣೆಯು ನ್ಯಾಯಾಧೀಕರ ಮುಂದೆ ಇರುವ ಪ್ರಯುಕ್ತ ಚರ್ಚಿಸುವದಕ್ಕೆ ಅನುಕೂಲ ಕೊಡಲು ಯುಕ್ತವಿಲ್ಲವೆಂದೂ ದಿವಾನರು ತಿಳಿಸಿ ಅವಸರದ ಠರಾವನ್ನು ತಳ್ಳಿಹಾಕಿದರು.

ಪೊಗದಿ ಹೂಗಬೇಕೆಂದೂ ಸಾಲು ಮಂಗಳನ್ನು ಹಾಕಬೇಕಾದರೆ ಹುಣ್ಣಿಮೆ ಬಿಡುವ ಗಿಡಗಳನ್ನೇ ಹಾಕಬೇಕೆಂದೂ ಶ್ರೀ ದೇವರಾಜೆ ಅರಸು ಭೂ ಸಾಳಂ ಚಂದ್ರಶೇಖರಯ್ಯ ಬಳೆಸಿದ್ದಲಿಂಗಪಟ್ಟಿ ಲಿಂಗೇಗೌಡ ಲಿಂಗಪಟ್ಟಿ ಮುಂತಾದವರು ಅನೇಕರು ಭಾಷಣಮಾಡಿದರು. ಒಟ್ಟಿ ಅಹಾರ ಸಮೋಟಿ ವಿಚಾರವನ್ನು ಎತ್ತಿ ಮಾತನಾಡಿದರು.

ಸಭೆಯು 5 ಗಂಟೆಗೆ ತಾ॥ 7 ನೇ ಮಂಗಳವಾರಕ್ಕೆ ಮುಂದುವರಿಸಲಾಯಿತು.

ಅಕ್ಕಿ ಅಭಾವ.

ಮೈಸೂರಿನಲ್ಲಿ ಈಗ ಎಲ್ಲೆಲ್ಲಿ ನೋಡಿದರು ಜನರು ಅಕ್ಕಿಗೆ ಸಾಲುಸಾಲಾಗಿ ನಿಂತು ಸಾಕಾಗಿ ಅಕ್ಕಿ ಸಿಕ್ಕದೆ ಹೋದವರೂ, ಅಂಗಡಿ ಮುಂಬಿನವನ್ನು ನೋಡಿದ ಹೆಂಗಸರೂ ಮಕ್ಕಳೂ ಸಾಲು ಸಾಲಾಗಿ ಹೋಗುವುದನ್ನು ನೋಡಬಹುದು. ಈ ದೃಶ್ಯ ಇದುವರೆಗೆ ನಾವು ನೋಡಿರಲಿಲ್ಲ. ಈಗ ಅಕ್ಕಿಗೆ 3-4 ದಿವಸದಿಂದ ಕೊಂಚವಷ್ಟಿಗೆ ಅಭಾವ ಕಡಿಮೆಯಾದರೂ ಅಕ್ಕಿ ಕೊಳ್ಳಲು ಹೋದರೆ ಯಾವ ಅಂಗಡಿಯಲ್ಲೂ ಒಂದು ಘಂಟೆ ಕಾಲ ನಿಲ್ಲದೆ ಕೊಳ್ಳಲು ಆಗುವುದಿಲ್ಲ. ನನಗೆ ದೂರು ಬಂದಿರುವಂತೆ ಅನೇಕ ಕಡೆ ಅಂಗಡಿ ಬಾಗಿಲುಗಳನ್ನು ಕೇವಲ 1-2 ಘಂಟೆ ತೆರೆಯುವುದೆಂದೂ, ಇನ್ನು ಕೆಲವು ಕಡೆ 1 2 ಹೊಗೆಯನ್ನು ತೆಗೆದು ವ್ಯಾಪಾರ ಮಾಡುತ್ತಾ ಗಲಭೆಗೆ ಕಾರಣವಾಗುತ್ತಿರುವುದು ನಮಗೆ ಗೊತ್ತು. ನಾವು ನೋಡಿದ್ದರಲ್ಲಿ ಸಂತೇಪೇಟೆ ಸಾಹುಕಾರ್ ಜವರಪ್ಪನವರು ಬೆಳಿಗ್ಗೆ 8 ಘಂಟೆಯಿಂದ ರಾತ್ರಿ 9 ಘಂಟೆಯವರಿಗೆ ಎಲ್ಲರಿಗೂ ಅಕ್ಕಿಯನ್ನು ಯಾವ ಗಲಭೆಗೂ ಅವಕಾಶಕೊಡದೆ ಕ್ಯೂ ಪದ್ಧತಿಯಲ್ಲಿ ಅಕ್ಕಿ ಕೊಡುತ್ತಿರುತ್ತಾರೆ. ಇತರ ವರ್ತಕರು, ಶೇಮೆಣ್ಣೆ ಮಾರುವವರು ಯಾತಕ್ಕೆ ಇವರಂತೆ ಕ್ಯೂ ಸಿಸ್ಟಂಜಾರಿಗೆ ತರಕೂಡದು.

ಸಾವಯವಿಕ

ಅಕ್ಕರ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇ. ಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Ranjit — — Satyabhama

ರಣಜಿತ್ ಟಾಕೀನ್

ವೈ. ವಿ. ರಾವ್ ಮತ್ತು ಪುಷ್ಪವಲ್ಲಿ

ಪಾತ್ರವಹಿಸಿರುವ

[ತೆಲಗು] **ಸತ್ಯಭಾಮಾ** [ತೆಲಗು]

ಶಕ್ತಿ ಸಾಧನೆಗೆ ಸುಲಭೋಪಾಯವು

ರಸಾಯನ ರಾಜ

ಶಕ್ತಿಸುಧಾ

ಸೇವನೆ ಎಂಬುದು ನಿಮ್ಮ ಜ್ಞಾಪಕದಲ್ಲಿರಲಿ.
ಅನೇಕರಿಂದ ಪ್ರಶಂಸಿಸಲ್ಪಟ್ಟಿದೆ. ವಸ್ತುಪ್ರದರ್ಶನಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ
ಬೆಲೆ 1 ರೂಪಾಯಿ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ OR [Violinist]

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ಎ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್
ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

Edited, Printed & published by M. S. Krishna Rao, at the Satyavadi Press. Chamarajapuram, Mysore.